O.S.48/2018
PW-3

ದಿನಾಂಕಃ **25.04.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ KRS ವಕೀಲರಿಂದಃ</u>**

ನಾನು ಹುಣಸೆ ಮರ ವ್ಯಾಪಾರ ಮಾಡುತ್ತಿರುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ ಎಂದರೆ ಸರಿ. ಸರ್ವೆ ನಂ.**13** ರಲ್ಲಿ ಒಟ್ಟು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಹುಣಸೆ ಮರಗಳು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು **20** ವರ್ಷಗಳಿಂದ ಈಗಿನ ವರೆಗೂ ಹುಣಸೆ ಫಸಲನ್ನು ಖರೀದಿ ಮಾಡುತ್ತಿರುತ್ತೇನೆ. **20** ವರ್ಷಗಳಿಂದ ವಾದಿ ಬಾಲಕೃಷ್ಣ ಮಾರಾಟ ಮಾಡುತ್ತಿದ್ದಾರೆ. ಯಾವ ಯಾವ ವರ್ಷ ಎಷ್ಟು ಬೆಳೆ ಖರೀದಿ ಮಾಡಿರುತ್ತೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ವಾದಿ ಬಾಲಕೃಷ್ಣ ನಾನು ಹುಣಸೆ ಫಸಲು ಖರೀದಿ ಮಾಡುತ್ತಿದ್ದ ಜಮೀನಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹುಣಸೆ ಮರಗಳ ಸ್ವಾಧೀನ ಪ್ರತಿವಾದಿಗಳ ಬಳಿ ಇರುತ್ತದೆ, ಸದರಿ ಮರಗಳು ಪ್ರತಿವಾದಿಗಳಿಗೆ ಸಂಬಂಧಪಟ್ಟಿದ್ದು ಎಂದರೆ ಅವರು ಬಂದ ಮೇಲೆ ಹಾಗೆ ಮಾಡಿರುತ್ತಾರೆ. ಪ್ರತಿವಾದಿಗಳೇ ಸದರಿ ಮರಗಳ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಪ್ರತಿವಾದಿಗಳು ನನ್ನನ್ನು ಹುಣಸೆ ಹಣ್ಣು ಹೊಡೆಯ ಬೇಡ ಎಂದು ಹೇಳಿದ ಕಾರಣ ನಾನು ಬಿಟ್ಟಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರತಿವಾದಿಗಳು ಬಂದಾಗಿನಿಂದ ನಾನು ಸದರಿ ಹುಣಸೆ ಮರದ ಹಣ್ಣಿನ ವ್ಯಾಪಾರ ಮಾಡಿಲ್ಲ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ವಾದಿ **1** ಎ ಕರೆದುಕೊಂಡು ಬಂದಿರುತ್ತಾರೆ. ನಾನು ವಾದಿಯ ಬಳಿ ಯಾವತ್ತು ಸಹ ವ್ಯಾಪಾರ ಮಾಡಿಲ್ಲ ಆದರೂ ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ

O.S.48/2018
PW-3